# ಅಲ್ಲಾಹೇತರರೊಂದಿಗೆ ಪ್ರಾರ್ಥಿಸುವುದು ಅತಿದೊಡ್ಡ ಶಿರ್ಕ್

< الكنادي >

ಮುಹಮ್ಮದ್ ಹಂಝಾ ಪುತ್ತೂರು

ಪರಿಶೀಲನೆ: ಅಬೂಬಕರ್ ನಝೀರ್ ಸಲಫಿ

# دعاء غير الله شرك أكبر

محمد حمزة البتوري

مراجعة: أبو بكر نذير السلفي

# ಪ್ರಸ್ತಾವನೆ

ಅಲ್ಲಾಹು ಮನುಷ್ಯರನ್ನು ಸೃಷ್ಟಿಸಿದ ಮುಖ್ಯ ಉದ್ದೇಶ ಅವನನ್ನು ಮಾತ್ರ ಆರಾಧಿಸಬೇಕು ಮತ್ತು ಅವನೊಂದಿಗೆ ಯಾವುದನ್ನೂ, ಯಾರನ್ನೂ ಸಹಭಾಗಿಯನ್ನಾಗಿ ಮಾಡಬಾರದು ಎಂಬುದಾಗಿದೆ.

ಅಲ್ಲಾಹು ಹೇಳುತ್ತಾನೆ:

﴿وَمَا خَلَقْتُ ٱلْجِنَّ وَٱلْإِنسَ إِلَّا لِيَعْبُدُونِ ٥٦﴾ [الذاريات: 56].

“ನನ್ನನ್ನು ಮಾತ್ರ ಆರಾಧಿಸುವುದಕ್ಕಲ್ಲದೆ ನಾನು ಜಿನ್ನ್‌ಗಳನ್ನು ಮತ್ತು ಮನುಷ್ಯರನ್ನು ಸೃಷ್ಟಿಸಿಲ್ಲ.” [ಕುರ್‌ಆನ್ 51:56]

ಆರಾಧನೆ ಎಂದರೆ ಅಲ್ಲಾಹು ಇಷ್ಟಪಡುವ ಮತ್ತು ತೃಪ್ತಿಪಡುವ ಮಾತುಗಳು ಮತ್ತು ಆಂತರಿಕ ಹಾಗೂ ಬಾಹ್ಯ ಕರ್ಮಗಳು. ನಮಾಝ್, ಝಕಾತ್, ಉಪವಾಸ, ಹಜ್ಜ್, ಸತ್ಯ ನುಡಿಯುವುದು, ಮಾತಾಪಿತರ ಆಜ್ಞಾಪಾಲನೆ ಮಾಡುವುದು, ಕುಟುಂಬ ಸಂಬಂಧವನ್ನು ಜೋಡಿಸುವುದು, ಕರಾರು ಪಾಲಿಸುವುದು, ಸದಾಚಾರವನ್ನು ಆದೇಶಿಸುವುದು, ದುರಾಚಾರವನ್ನು ವಿರೋಧಿಸುವುದು, ನೆರೆಯವರಿಗೆ, ಅನಾಥರಿಗೆ, ಬಡವರಿಗೆ, ದಾರಿಹೋಕರಿಗೆ ಸಹಾಯ ಮಾಡುವುದು, ಅವಿಶ್ವಾಸಿಗಳ ಮತ್ತು ಕಪಟವಿಶ್ವಾಸಿಗಳ ವಿರುದ್ಧ ಹೋರಾಡುವುದು, ಪ್ರಾರ್ಥನೆ, ದಿಕ್ರ್, ಕುರ್‌ಆನ್ ಪಾರಾಯಣ ಮುಂತಾದವುಗಳೆಲ್ಲವೂ ಆರಾಧನೆಗಳು.

ಅದೇ ರೀತಿ ಅಲ್ಲಾಹನನ್ನು ಮತ್ತು ಪ್ರವಾದಿ(ﷺ)ರನ್ನು ಪ್ರೀತಿಸುವುದು, ಅಲ್ಲಾಹನನ್ನು ಭಯಪಡುವುದು, ಅವನೆಡೆಗೆ ಪಶ್ಚಾತ್ತಾಪಪಟ್ಟು ಮರಳುವುದು, ಅವನಿಗೆ ನಿಷ್ಕಳಂಕತೆಯನ್ನು ಪ್ರಕಟಿಸುವುದು, ಸಹನೆ

ವಹಿಸುವುದು, ಅವನ ಅನುಗ್ರಹಗಳಿಗೆ ಕೃತಜ್ಞತೆ ಸಲ್ಲಿಸುವುದು, ಅವನ ವಿಧಿ ತೀರ್ಮಾನಕ್ಕೆ ತೃಪ್ತಿ ಸೂಚಿಸುವುದು, ಅವನ ಮೇಲೆ ಭರವಸೆಯಿಡುವುದು, ಅವನ ಕಾರುಣ್ಯವನ್ನು ಆಶಿಸುವುದು, ಅವನ ಶಿಕ್ಷೆಯನ್ನು ಭಯಪಡುವುದು ಮುಂತಾದವುಗಳು ಕೂಡ ಆರಾಧನೆಗಳು.

ಶಿರ್ಕ್ ಎಂದರೆ ಅಲ್ಲಾಹನ ಆರಾಧನೆಯಲ್ಲಿ ಅವನೊಂದಿಗೆ ಇತರರನ್ನು ಸಹಭಾಗಿಯನ್ನಾಗಿ ಮಾಡಿಕೊಳ್ಳುವುದು. ಅಲ್ಲಾಹನನ್ನು ಆರಾಧಿಸುವಂತೆ ಅಲ್ಲಾಹು ಅಲ್ಲದವರನ್ನು ಆರಾಧಿಸುವುದು, ಅಲ್ಲಾಹನನ್ನು ಭಯಪಡುವಂತೆ ಅಲ್ಲಾಹು ಅಲ್ಲದವರನ್ನು ಭಯಪಡುವುದು ಮತ್ತು ಅಲ್ಲಾಹನೊಂದಿಗೆ ಪ್ರಾರ್ಥಿಸುವುದು, ಅವನಿಗೆ ನಮಾಝ್ ಮಾಡುವುದು, ಅವನಿಗೆ ಬಲಿ ಅರ್ಪಿಸುವುದು, ಅವನ ಮೇಲೆ ಹರಕೆ ಹೊರುವುದು ಮೊದಲಾದ ಅಲ್ಲಾಹನೆಡೆಗೆ ಸಮೀಪಗೊಳ್ಳುವುದಕ್ಕಾಗಿ ಮಾಡುವ ಕರ್ಮಗಳನ್ನು ಅಲ್ಲಾಹು ಅಲ್ಲದವರ ಕಡೆಗೆ ಸಮೀಪಗೊಳ್ಳಲು ಮಾಡುವುದು ಮುಂತಾದವುಗಳೆಲ್ಲವೂ ಶಿರ್ಕ್.

ಈ ಲೇಖನದಲ್ಲಿ ನಾವು ದುಆ ಅಥವಾ ಪ್ರಾರ್ಥನೆ ಎಂಬ ಆರಾಧನೆಯನ್ನು ಅಲ್ಲಾಹು ಅಲ್ಲದವರಿಗೆ ಸಲ್ಲಿಸುವ ಬಗ್ಗೆ ಮಾತ್ರ ಮಾತನಾಡಲಿದ್ದೇವೆ. ಈ ವಿಷಯಕ್ಕೆ ಪ್ರವೇಶಿಸುವ ಮೊದಲು ಪ್ರಾರ್ಥನೆ ಎಂಬುದು ಒಂದು ಮಹಾ ಆರಾಧನೆಯಾಗಿದೆ, ಅಲ್ಲಾಹು ಅನೇಕ ಆಯತ್‌ಗಳ ಮೂಲಕ ಅದನ್ನು ತನಗೆ ಮಾತ್ರ ಸೀಮಿತಗೊಳಿಸಿದ್ದಾನೆ, ಪ್ರವಾದಿ(ﷺ)ರವರು ಅನೇಕ ಹದೀಸ್‌ಗಳಲ್ಲಿ ಪ್ರಾರ್ಥನೆಯ ಶ್ರೇಷ್ಠತೆಯನ್ನು ವಿವರಿಸಿದ್ದಾರೆ ಮತ್ತು ಜನರು ಅಲ್ಲಾಹೇತರರಿಗೆ ಅತಿಹೆಚ್ಚಾಗಿ ಅರ್ಪಿಸುತ್ತಿರುವ ಆರಾಧನೆಗಳಲ್ಲೊಂದು ಪ್ರಾರ್ಥನೆಯಾಗಿದೆ ಎಂಬುದನ್ನು ಮೊಟ್ಟಮೊದಲು ಹೇಳಲು ಬಯಸುತ್ತೇನೆ.

ತಮ್ಮನ್ನು ಮುಸ್ಲಿಮ್ ಎಂದು ಕರೆಯುವ ಅನೇಕ ಜನರು ಅಲ್ಲಾಹು ಅಲ್ಲದವರೊಂದಿಗೆ ಪ್ರಾರ್ಥಿಸುತ್ತಲೂ ಸಹಾಯ ಬೇಡುತ್ತಲೂ ಇದ್ದಾರೆ. ಓ ಪ್ರವಾದಿಯವರೇ, ಓ ಅಬ್ದುಲ್ ಕಾದಿರ್ ಜೀಲಾನಿಯವರೇ, ಓ ಶೈಖ್ ಬದವಿಯವರೇ, ಓ ನಫೀಸತ್ ಬೀವಿಯವರೇ, ನನ್ನ ಪಾಪಗಳನ್ನು ಕ್ಷಮಿಸಿರಿ, ನನಗೆ ಅನ್ನಾಧಾರ ನೀಡಿರಿ, ನನ್ನನ್ನು ಶತ್ರುಗಳಿಂದ ಕಾಪಾಡಿರಿ, ನಾನು ಅನ್ಯಾಯಕ್ಕೊಳಗಾಗಿದ್ದೇನೆ ನನಗೆ ಸಹಾಯ ಮಾಡಿರಿ, ನಿಮ್ಮೊಂದಿಗಲ್ಲದೆ ನಾನು ಇನ್ನಾರಲ್ಲಿ ಪ್ರಾರ್ಥಿಸಲಿ, ನೀವಲ್ಲದೆ ನನಗೆ ಇನ್ನಾರಿದ್ದಾರೆ, ನಿಮ್ಮ ಆಶ್ರಯವಲ್ಲದೆ ನನಗೆ ಬೇರೆ ಯಾರ ಆಶ್ರಯವಿದೆ, ಮುಂತಾಗಿ ಪ್ರಾರ್ಥಿಸುವುದನ್ನು ಕಾಣಬಹುದು.

ಇವೆಲ್ಲವೂ ಶಿರ್ಕ್ ಮತ್ತು ಕುಫ್ರ್. ಅಲ್ಲಾಹನ ಧರ್ಮದಿಂದ ಹೊರ ಹೋಗುವಂತಹ ಅತಿದೊಡ್ಡ ಶಿರ್ಕ್. ಪೂರ್ವಿಕರೂ ಇತ್ತೀಚಿನವರೂ ಆದ ಸರ್ವ ಉಲಮಾಗಳು ಇದನ್ನು ಖಂಡಿಸಿದ್ದಾರೆ, ವಿರೋಧಿಸಿದ್ದಾರೆ ಮತ್ತು ಶಿರ್ಕ್ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಆದ್ದರಿಂದ ಮುಸ್ಲಿಮ್ ಸಮುದಾಯವು ಈ ಶಿರ್ಕ್‌ನಿಂದ ದೂರವಿರುವುದಕ್ಕಾಗಿ ಇಲ್ಲಿ ನಾವು ಉಲಮಾಗಳು ಹೇಳಿದ ಕೆಲವು ಮಾತುಗಳನ್ನು ಉದ್ಧರಿಸುವೆವು. ಅದಕ್ಕಿಂತ ಮುಂಚೆ ಪ್ರಾರ್ಥನೆಯ ಬಗ್ಗೆ ಸ್ವಲ್ಪ ವಿವರಿಸಲು ಬಯಸುತ್ತೇನೆ.

## ಪ್ರಾರ್ಥನೆ ಆರಾಧನೆಯಾಗಿದೆ

ಪ್ರಾರ್ಥನೆ ಅತಿದೊಡ್ಡ ಆರಾಧನೆ. ಅಲ್ಲಾಹು ಅನೇಕ ಆಯತ್‌ಗಳ ಮೂಲಕ ಅದನ್ನು ತನಗೆ ಮಾತ್ರ ಸೀಮಿತಗೊಳಿಸಿದ್ದಾನೆ. ಪ್ರವಾದಿ(ﷺ)ರವರು ಅನೇಕ ಹದೀಸ್‌ಗಳಲ್ಲಿ ಅದರ ಶ್ರೇಷ್ಠತೆಯನ್ನು ವಿವರಿಸಿದ್ದಾರೆ. ಪ್ರವಾದಿ(ﷺ) ಹೇಳಿದರು:

{ إِنَّ اللَّهَ حَيِيٌّ كَرِيمٌ يَسْتَحْيِي إِذَا رَفَعَ الرَّجُلُ إِلَيْهِ يَدَيْهِ أَنْ يَرُدَّهُمَا صِفْرًا خَائِبَتَيْنِ } رواه الترمذي.

"ಖಂಡಿತವಾಗಿಯೂ ಅಲ್ಲಾಹು ನಾಚಿಕೆ ಸ್ವಭಾವದವನು ಮತ್ತು ಉದಾರಿ. ತನ್ನೆಡೆಗೆ ಕೈ ಎತ್ತಿ ಪ್ರಾರ್ಥಿಸಿದ ವ್ಯಕ್ತಿಯ ಕೈಗಳನ್ನು ಏನೂ ಕೊಡದೆ ಶೂನ್ಯವಾಗಿ ಮರಳಿಸಲು ಅವನು ನಾಚಿಕೆಪಡುತ್ತಾನೆ." [ಅತ್ತಿರ್ಮಿದೀ]

ಪ್ರವಾದಿ(ﷺ) ಹೇಳಿದರು:

{ لَا يَرُدُّ الْقَضَاءَ إِلَّا الدُّعَاءُ } رواه الترمذي.

"ಪ್ರಾರ್ಥನೆಯ ಹೊರತು ಇನ್ನಾವುದೂ ಅಲ್ಲಾಹನ ವಿಧಿ ತೀರ್ಮಾನವನ್ನು ಬದಲಾಯಿಸುವುದಿಲ್ಲ." [ಅತ್ತಿರ್ಮಿದೀ]

ಪ್ರವಾದಿ(ﷺ) ಹೇಳಿದರು:

{ لَيْسَ شَيْءٌ أَكْرَمَ عَلَى اللَّهِ تَعَالَى مِنَ الدُّعَاءِ } رواه الترمذي.

"ಅಲ್ಲಾಹನ ಬಳಿ ಪ್ರಾರ್ಥನೆಗಿಂತಲೂ ಹೆಚ್ಚು ಗೌರವವನ್ನು ಹೊಂದಿರುವ ಬೇರೆ ವಸ್ತುವಿಲ್ಲ." [ಅತ್ತಿರ್ಮಿದೀ]

ಪ್ರಾರ್ಥನೆಯು ಆರಾಧನೆಯಾಗಿದೆ ಎಂದು ಪ್ರವಾದಿ(ﷺ)ರವರು ಸ್ಪಷ್ಟವಾಗಿ ಹೇಳಿದ್ದು ಹದೀಸ್‌ಗಳಲ್ಲಿ ವರದಿಯಾಗಿದೆ. ಅನ್ನುಅ್‌ಮಾನ್ ಇಬ್ನ್ ಬಶೀರ್(رضي الله عنه) ವರದಿ ಮಾಡಿದ ಹದೀಸಿನಲ್ಲಿ ಪ್ರವಾದಿ(ﷺ) ಹೇಳುತ್ತಾರೆ:

{ الدُّعَاءُ هُوَ الْعِبَادَةُ } رواه أبو داود.

“ಪ್ರಾರ್ಥನೆಯೇ ಆರಾಧನೆ.”

ನಂತರ ಅವರು ಈ ಆಯತ್ತನ್ನು ಪಾರಾಯಣ ಮಾಡುತ್ತಾರೆ:

﴿ وَقَالَ رَبُّكُمُ ٱدۡعُونِيٓ أَسۡتَجِبۡ لَكُمۡۚ إِنَّ ٱلَّذِينَ يَسۡتَكۡبِرُونَ عَنۡ عِبَادَتِي سَيَدۡخُلُونَ جَهَنَّمَ دَاخِرِينَ ٦٠ ﴾ [غافر: 60] .

“ನಿಮ್ಮ ರಬ್ಬ್ ಹೇಳುತ್ತಾನೆ: ನನ್ನನ್ನು ಕರೆದು ಪ್ರಾರ್ಥಿಸಿರಿ. ನಾನು ನಿಮಗೆ ಉತ್ತರ ನೀಡುತ್ತೇನೆ. ನನ್ನನ್ನು ಆರಾಧಿಸಲು ಅಹಂಕಾರ ಪಡುವವರು ನಿಂದ್ಯರಾಗಿ ನರಕಾಗ್ನಿಯನ್ನು ಪ್ರವೇಶಿಸುವರು." [ಕುರ್‌ಆನ್ 40:60] [ಅಬೂ ದಾವೂದ್]

ಪ್ರಾರ್ಥನೆ ಮಾತ್ರ ಆರಾಧನೆಯಲ್ಲದಿದ್ದರೂ ಇಲ್ಲಿ ಪ್ರವಾದಿ(ﷺ)ರವರು ಆರಾಧನೆಯನ್ನು ಪ್ರಾರ್ಥನೆಗೆ ಮಾತ್ರ ಸೀಮಿತಗೊಳಿಸಿದ್ದು ಪ್ರಾರ್ಥನೆಗಿರುವ ಮಹತ್ವ ಮತ್ತು ಶ್ರೇಷ್ಠತೆಯನ್ನು ತಿಳಿಸುವುದಕ್ಕಾಗಿದೆ. ಉದಾಹರಣೆಗೆ ಪ್ರವಾದಿ(ﷺ)ರವರು ಹಜ್ಜನ್ನು ಅರಫ ಎಂದು ಕರೆದರು. [ಅನ್ನಸಾಈ] ಹಜ್ಜ್ ಎಂದರೆ ಅರಫದಲ್ಲಿ ನಿಲ್ಲುವುದು ಮಾತ್ರವಲ್ಲದಿದ್ದರೂ ಅರಫದಲ್ಲಿ ನಿಲ್ಲುವುದು ಹಜ್ಜ್ ಕರ್ಮದ ಸುಪ್ರಧಾನ ಭಾಗವಾಗಿದೆ. ಅದೇ ರೀತಿ ಪ್ರಾರ್ಥನೆ ಮಾತ್ರ ಆರಾಧನೆಯಲ್ಲದಿದ್ದರೂ ಪ್ರಾರ್ಥನೆಯು ಆರಾಧನೆಯ ಸುಪ್ರಧಾನ ಭಾಗವಾಗಿದೆ.

ಅದೇ ರೀತಿ ಅಲ್ಲಾಹು ಅನೇಕ ಆಯತ್‌ಗಳಲ್ಲಿ ಪ್ರಾರ್ಥನೆಯನ್ನು ಆರಾಧನೆ ಎಂದು ಹೇಳಿದ್ದಾನೆ. ಅಲ್ಲಾಹು ಹೇಳುತ್ತಾನೆ:

﴿۞قُلۡ إِنِّي نُهِيتُ أَنۡ أَعۡبُدَ ٱلَّذِينَ تَدۡعُونَ مِن دُونِ ٱللَّهِ لَمَّا جَآءَنِيَ ٱلۡبَيِّنَٰتُ مِن رَّبِّي وَأُمِرۡتُ أَنۡ أُسۡلِمَ لِرَبِّ ٱلۡعَٰلَمِينَ ٦٦﴾ [غافر: 66].

“ಹೇಳಿರಿ: ನನ್ನ ರಬ್ಬ್‌ನ ವತಿಯಿಂದ ನನಗೆ ಪುರಾವೆ ಸಿಕ್ಕಿರುವುದರಿಂದ ನೀವು ಅಲ್ಲಾಹನನ್ನು ಬಿಟ್ಟು ಯಾರನ್ನು ಕರೆದು ಪ್ರಾರ್ಥಿಸುತ್ತಿರುವಿರೋ ಅವರನ್ನು ಆರಾಧಿಸುವುದನ್ನು ನನಗೆ ವಿರೋಧಿಸಲಾಗಿದೆ. ಸರ್ವಲೋಕಗಳ ಒಡೆಯನಿಗೆ ಶರಣಾಗಬೇಕೆಂದು ನನ್ನೊಂದಿಗೆ ಆಜ್ಞಾಪಿಸಲಾಗಿದೆ.” [ಕುರ್‌ಆನ್ 40:66]

ಅಲ್ಲಾಹು ಹೇಳುತ್ತಾನೆ:

﴿وَقَالَ رَبُّكُمُ ٱدۡعُونِيٓ أَسۡتَجِبۡ لَكُمۡۚ إِنَّ ٱلَّذِينَ يَسۡتَكۡبِرُونَ عَنۡ عِبَادَتِي سَيَدۡخُلُونَ جَهَنَّمَ دَاخِرِينَ ٦٠﴾ [غافر: 60].

“ನಿಮ್ಮ ರಬ್ಬ್ ಹೇಳುತ್ತಾನೆ: ನನ್ನನ್ನು ಕರೆದು ಪ್ರಾರ್ಥಿಸಿರಿ. ನಾನು ನಿಮಗೆ ಉತ್ತರ ನೀಡುತ್ತೇನೆ. ನನ್ನನ್ನು ಆರಾಧಿಸಲು ಅಹಂಕಾರ ಪಡುವವರು ನಿಂದ್ಯರಾಗಿ ನರಕಾಗ್ನಿಯನ್ನು ಪ್ರವೇಶಿಸುವರು.” [ಕುರ್‌ಆನ್ 40:60]

ಈ ಎರಡು ಆಯತ್‌ಗಳಲ್ಲೂ ಅಲ್ಲಾಹು ಪ್ರಾರ್ಥನೆಯನ್ನು ಆರಾಧನೆ ಎಂದು ಕರೆದಿದ್ದಾನೆ. ಪ್ರಾರ್ಥನೆಗೆ ಎಷ್ಟು ಮಹತ್ವವಿದೆಯೆಂದು ಇದರಿಂದ ಅರ್ಥ ಮಾಡಿಕೊಳ್ಳಬಹುದು.

ಅಲ್ಲಾಹನೊಂದಿಗೆ ಪ್ರಾರ್ಥಿಸಬೇಕೆಂದು ಅಲ್ಲಾಹು ಆಜ್ಞಾಪಿಸಿದ್ದಾನೆ. ಅಲ್ಲಾಹು ಏನೆಲ್ಲ ಆಜ್ಞಾಪಿಸುತ್ತಾನೋ ಅವೆಲ್ಲವೂ ಆರಾಧನೆಗಳಾಗಿವೆ. ಅವು ಕಡ್ಡಾಯವಾಗಿರಬಹುದು ಅಥವಾ ಪ್ರೋತ್ಸಾಹನೀಯವಾಗಿರ ಬಹುದು.

ಅದೇ ರೀತಿ ಅಲ್ಲಾಹನೊಂದಿಗೆ ಪ್ರಾರ್ಥಿಸುವಂತೆ ಪ್ರವಾದಿ(ﷺ)ರವರು ಕೂಡ ಆಜ್ಞಾಪಿಸಿದ್ದಾರೆ. ಪ್ರವಾದಿ(ﷺ) ಹೇಳುತ್ತಾರೆ:

{ فَأَمَّا الرُّكُوعُ فَعَظِّمُوا فِيهِ الرَّبَّ تَعَالَى، وَأَمَّا السُّجُودُ فَأَكْثِرُوا مِنَ الدُّعَاءِ، فَقَمِنٌ أَنْ يُسْتَجَابَ لَكُمْ } رواه مسلم.

"ರಕೂಅ್‌ನಲ್ಲಿ ನೀವು ನಿಮ್ಮ ರಬ್ಬ್‌ನನ್ನು ಮಹತ್ವಪಡಿಸಿರಿ ಮತ್ತು ಸುಜೂದ್‌ನಲ್ಲಿ ಪ್ರಾರ್ಥನೆಯನ್ನು ಹೆಚ್ಚಿಸಿರಿ. ನಿಮಗೆ ಉತ್ತರ ಸಿಗಲು ಅದು ಹೆಚ್ಚು ಅರ್ಹವಾಗಿದೆ." [ಮುಸ್ಲಿಮ್]

ಶೈಖ್ ಅಬ್ದುಲ್ಲಾಹ್ ಅಬಾ ಬುತೈನ್(ﷺ) ಹೇಳುತ್ತಾರೆ:

كُلُّ مَا أَمَرَ اللَّهُ بِهِ أَمْرَ إِيجَابٍ أَوِ اسْتِحْبَابٍ فَهُوَ عِبَادَةٌ عِنْدَ جَمِيعِ الْعُلَمَاءِ، فَمَنْ قَالَ إِنَّ دُعَاءَ الْعَبْدِ رَبَّهُ لَيْسَ بِعِبَادَةٍ لَهُ فَهُوَ ضَالٌّ، بَلْ كَافِرٌ

"ಸರ್ವ ಉಲಮಾಗಳ ಅಭಿಪ್ರಾಯ ಪ್ರಕಾರ ಅಲ್ಲಾಹು ಕಡ್ಡಾಯ ರೂಪದಲ್ಲಿ ಅಥವಾ ಪ್ರೋತ್ಸಾಹನೀಯ ರೂಪದಲ್ಲಿ ಆದೇಶಿಸಿದ್ದೆಲ್ಲವೂ ಆರಾಧನೆಗಳಾಗಿವೆ. ಮನುಷ್ಯನು ಅವನ ರಬ್ಬಿನೊಂದಿಗೆ ಪ್ರಾರ್ಥಿಸುವುದು ಆರಾಧನೆ ಅಲ್ಲವೆಂದು ಹೇಳುವವನು ಪಥಭ್ರಷ್ಟನು, ಮಾತ್ರವಲ್ಲ ಆತ ಅವಿಶ್ವಾಸಿ ಕೂಡ." [ತಅ್‌ಸೀಸು ತ್ತಕ್ದೀಸ್ ಫೀ ಕಶ್ಫಿ ತಲ್ಬೀಸಿ ದಾವೂದಿಬ್ನಿ ಜರ್ಜೀಸ್ ಪುಟ 127]

## ಪ್ರಾರ್ಥನೆ ಅಲ್ಲಾಹನೊಂದಿಗೆ ಮಾತ್ರ

ಅಲ್ಲಾಹನೊಂದಿಗೆ ಮಾತ್ರ ಪ್ರಾರ್ಥಿಸಬೇಕೆಂದು ಕುರ್‌ಆನ್ ಮತ್ತು ಸುನ್ನತ್ ಆದೇಶಿಸುತ್ತದೆ. ಮಾತ್ರವಲ್ಲ, ಅಲ್ಲಾಹು ಅಲ್ಲದವರೊಂದಿಗೆ ಪ್ರಾರ್ಥಿಸುವುದನ್ನು ಅವೆರಡೂ ವಿರೋಧಿಸುತ್ತವೆ. ಅಲ್ಲಾಹು ಹೇಳುತ್ತಾನೆ:

﴿ ٱدۡعُواْ رَبَّكُمۡ تَضَرُّعٗا وَخُفۡيَةًۚ ﴾ [الأعراف: 55] .

"ನೀವು ವಿನಯತೆಯೊಂದಿಗೆ ಮತ್ತು ಗುಪ್ತವಾಗಿ ನಿಮ್ಮ ರಬ್ಬನ್ನು ಕರೆದು ಪ್ರಾರ್ಥಿಸಿರಿ." [ಕುರ್‌ಆನ್ 7:55]

﴿ أَمَّن يُجِيبُ ٱلۡمُضۡطَرَّ إِذَا دَعَاهُ وَيَكۡشِفُ ٱلسُّوٓءَ وَيَجۡعَلُكُمۡ خُلَفَآءَ ٱلۡأَرۡضِۗ ﴾ [النمل: 62] .

"ಅಥವಾ, ಕಷ್ಟದಲ್ಲಿರುವವನು ಕರೆದು ಪ್ರಾರ್ಥಿಸಿದಾಗ ಅವನಿಗೆ ಉತ್ತರ ನೀಡುವವನು, ಕಷ್ಟವನ್ನು ನಿವಾರಿಸುವವನು ಮತ್ತು ನಿಮ್ಮನ್ನು ಭೂಮಿಯಲ್ಲಿ ಪ್ರತಿನಿಧಿಗಳನ್ನಾಗಿ ಮಾಡುವವನು (ಉತ್ತಮನೋ?) (ಅಥವಾ ಅವರ ಆರಾಧ್ಯರೋ?)" [ಕುರ್‌ಆನ್ 27:62]

﴿ وَإِذَا سَأَلَكَ عِبَادِي عَنِّي فَإِنِّي قَرِيبٌۖ أُجِيبُ دَعۡوَةَ ٱلدَّاعِ إِذَا دَعَانِۖ ﴾ [البقرة: 186] .

"ನನ್ನ ದಾಸರು ತಮ್ಮೊಂದಿಗೆ ನನ್ನ ಬಗ್ಗೆ ಕೇಳಿದರೆ ಖಂಡಿತವಾಗಿಯೂ ನಾನು (ಅವರಿಗೆ ಅತಿ) ನಿಕಟವಾಗಿರುವೆನು (ಎಂದು ಹೇಳಿರಿ). ಪ್ರಾರ್ಥಿಸುವವನು ನನ್ನನ್ನು ಕರೆದು ಪ್ರಾರ್ಥಿಸಿದರೆ ನಾನು ಆ ಪ್ರಾರ್ಥನೆಗೆ ಉತ್ತರವನ್ನು ನೀಡುವೆನು." [ಕುರ್‌ಆನ್ 2:186]

﴿ وَسۡـَٔلُواْ ٱللَّهَ مِن فَضۡلِهِۦٓۚ ﴾ [النساء: 32].

“ಅಲ್ಲಾಹನ ಔದಾರ್ಯದ ಮೂಲಕ ಅವನೊಂದಿಗೆ ಬೇಡಿಕೊಳ್ಳಿರಿ.” [ಕುರ್‌ಆನ್ 4:32]

ಶೈಖ್ ಅಬ್ದುರ್ರಹ್ಮಾನ್ ಇಬ್ನ್ ಕಾಸಿಮ್(ﷺ) ಹೇಳುತ್ತಾರೆ:

“ಪ್ರಾರ್ಥನೆಯನ್ನು ಅಲ್ಲಾಹನಿಗೆ ಮಾತ್ರ ಸೀಮಿತಗೊಳಿಸಬೇಕು ಎಂಬುದರ ಬಗ್ಗೆ ಹೇಳುವುದಾದರೆ ಕುರ್‌ಆನಿನ ಸುಮಾರು 300 ಸ್ಥಳಗಳಲ್ಲಿ ಅಲ್ಲಾಹು ಇದನ್ನು ಹೇಳಿದ್ದಾನೆ. ಉದಾ:

﴿ ٱدۡعُونِيٓ أَسۡتَجِبۡ لَكُمۡۚ ﴾ [غافر: 60].

“ನನ್ನನ್ನು ಕರೆದು ಪ್ರಾರ್ಥಿಸಿರಿ. ನಾನು ನಿಮಗೆ ಉತ್ತರ ನೀಡುತ್ತೇನೆ.” [ಕುರ್‌ಆನ್ 40:60]

﴿ وَٱدۡعُوهُ مُخۡلِصِينَ لَهُ ٱلدِّينَۚ ﴾ [الأعراف: 29].

"ಶರಣಾಗತಿಯನ್ನು ಅವನಿಗೆ ನಿಷ್ಕಳಂಕಗೊಳಿಸಿ ಅವನೊಂದಿಗೆ ಪ್ರಾರ್ಥಿಸಿರಿ." [ಕುರ್‌ಆನ್ 7:29]

ಕೆಲವು ಕಡೆ ಅಲ್ಲಾಹು ಇದನ್ನು ನಿಷೇಧ ರೂಪದಲ್ಲಿ ಹೇಳಿದ್ದಾನೆ. ಉದಾ:

﴿ فَلَا تَدۡعُواْ مَعَ ٱللَّهِ أَحَدٗا ١٨ ﴾ [الجن: 18].

"ಅಲ್ಲಾಹನೊಂದಿಗೆ ಇತರ ಯಾರನ್ನೂ ಕರೆದು ಪ್ರಾರ್ಥಿಸಬಾರದು." [ಕುರ್‌ಆನ್ 72:18]

ಕೆಲವೊಮ್ಮೆ ಎಚ್ಚರಿಕೆಯ ರೂಪದಲ್ಲಿ ಹೇಳಿದ್ದಾನೆ. ಉದಾ:

﴿ فَلَا تَدۡعُ مَعَ ٱللَّهِ إِلَٰهًا ءَاخَرَ فَتَكُونَ مِنَ ٱلۡمُعَذَّبِينَ ٢١٣ ﴾

[الشعراء: 213] .

"ಆದ್ದರಿಂದ ತಾವು ಅಲ್ಲಾಹನೊಂದಿಗೆ ಅನ್ಯ ಆರಾಧ್ಯರನ್ನು ಕರೆದು ಪ್ರಾರ್ಥಿಸಬಾರದು. ಹಾಗೆ ಪ್ರಾರ್ಥಿಸಿದರೆ ತಾವು ಶಿಕ್ಷಿಸಲ್ಪಡುವವರಲ್ಲಿ ಸೇರಿದವರಾಗುವಿರಿ." [ಕುರ್‌ಆನ್ 26:213]

ಕೆಲವೊಮ್ಮೆ ದೈವಿಕತೆಗೆ ಅರ್ಹನಾಗಿರುವವನು ಅಲ್ಲಾಹು ಮಾತ್ರ ಎಂಬುದನ್ನು ದೃಢೀಕರಿಸುವ ರೂಪದಲ್ಲಿ ಹೇಳಿದ್ದಾನೆ. ಉದಾ:

﴿وَلَا تَدۡعُ مَعَ ٱللَّهِ إِلَٰهًا ءَاخَرَۘ لَآ إِلَٰهَ إِلَّا هُوَۚ﴾ [القصص: 88] .

"ಅಲ್ಲಾಹುವಿನೊಂದಿಗೆ ಅನ್ಯ ಆರಾಧ್ಯರನ್ನು ಕರೆದು ಪ್ರಾರ್ಥಿಸಬಾರದು. ಅವನ ಹೊರತು ಬೇರೆ ಸತ್ಯ ಆರಾಧ್ಯರಿಲ್ಲ." [ಕುರ್‌ಆನ್ 28:88]

ಕೆಲವೊಮ್ಮೆ ಪ್ರಾರ್ಥನೆ ಮಾಡುವವನನ್ನು ಅದರಿಂದ ತಡೆಯುವ ರೂಪದಲ್ಲಿ ಹೇಳಿದ್ದಾನೆ. ಉದಾ:

﴿وَلَا تَدۡعُ مِن دُونِ ٱللَّهِ مَا لَا يَنفَعُكَ وَلَا يَضُرُّكَۖ﴾ [يونس: 106] .

"ಅಲ್ಲಾಹನ ಹೊರತು ತಮಗೆ ಯಾವುದೇ ಪ್ರಯೋಜನವಾಗಲಿ ಹಾನಿಯಾಗಲಿ ಉಂಟುಮಾಡದವರನ್ನು ತಾವು ಕರೆದು ಪ್ರಾರ್ಥಿಸಬಾರದು." [ಕುರ್‌ಆನ್ 10:106]

ಕೆಲವೊಮ್ಮೆ ತಿಳಿಸಿಕೊಡುವ ರೂಪದಲ್ಲಿ ಹೇಳಿದ್ದಾನೆ. ಉದಾ:

﴿قُلْ أَرَءَيْتُم مَّا تَدْعُونَ مِن دُونِ ٱللَّهِ أَرُونِى مَاذَا خَلَقُوا۟ مِنَ ٱلْأَرْضِ أَمْ لَهُمْ شِرْكٌ فِى ٱلسَّمَٰوَٰتِ﴾ [الأحقاف: 4].

"ಹೇಳಿರಿ: ಅಲ್ಲಾಹನ ಹೊರತು ನೀವು ಕರೆದು ಪ್ರಾರ್ಥಿಸುತ್ತಿರುವುದರ ಬಗ್ಗೆ ನೀವು ಚಿಂತಿಸಿ ನೋಡಿರುವಿರಾ? ಅವರು ಭೂಮಿಯಲ್ಲಿ ಏನನ್ನು ಸೃಷ್ಟಿಸಿರುವರೆಂದು ನನಗೆ ತೋರಿಸಿಕೊಡಿ. ಅಥವಾ ಆಕಾಶಗಳ ಸೃಷ್ಟಿಯಲ್ಲಿ ಅವರಿಗೆ ಏನಾದರೂ ಸಹಭಾಗಿತ್ವವಿದೆಯೇ?" [ಕುರ್‌ಆನ್ 46:4]

ಕೆಲವೊಮ್ಮೆ ವಿರೋಧ ಅಥವಾ ನಿರಾಕರಣೆಯ ಅರ್ಥವನ್ನು ಹೊಂದಿರುವ ಆಜ್ಞಾರೂಪದಲ್ಲಿ ಹೇಳಿದ್ದಾನೆ. ಉದಾ:

﴿قُلِ ٱدْعُوا۟ ٱلَّذِينَ زَعَمْتُم مِّن دُونِ ٱللَّهِ لَا يَمْلِكُونَ مِثْقَالَ ذَرَّةٍ فِى ٱلسَّمَٰوَٰتِ وَلَا فِى ٱلْأَرْضِ﴾ [سبأ: 22].

"ಹೇಳಿರಿ: ಅಲ್ಲಾಹನ ಹೊರತು ನೀವು ವಾದಿಸುತ್ತಿರುವ ಎಲ್ಲರನ್ನೂ ಕರೆದು ಪ್ರಾರ್ಥಿಸಿರಿ. ಆಕಾಶಗಳಲ್ಲಾಗಲಿ ಭೂಮಿಯಲ್ಲಾಗಲಿ ಒಂದು ಅಣುವಿನ ತೂಕದಷ್ಟು ಕೂಡ ಅವರ ಸ್ವಾಧೀನದಲ್ಲಿಲ್ಲ." [ಕುರ್‌ಆನ್ 34:22]

ಕೆಲವೊಮ್ಮೆ ಪ್ರಾರ್ಥನೆಯು ಆರಾಧನೆಯಾಗಿದೆ, ಅದನ್ನು ಅಲ್ಲಾಹು ಅಲ್ಲದವರಿಗೆ ಅರ್ಪಿಸುವುದು ಶಿರ್ಕ್ ಎಂದು ತಿಳಿಸಿಕೊಡುವ ರೂಪದಲ್ಲಿ ಹೇಳಿದ್ದಾನೆ. ಉದಾ:

﴿وَمَنْ أَضَلُّ مِمَّن يَدْعُواْ مِن دُونِ ٱللَّهِ مَن لَّا يَسْتَجِيبُ لَهُۥٓ إِلَىٰ يَوْمِ ٱلْقِيَـٰمَةِ وَهُمْ عَن دُعَآئِهِمْ غَـٰفِلُونَ ۝٥ وَإِذَا حُشِرَ ٱلنَّاسُ كَانُواْ لَهُمْ أَعْدَآءً وَكَانُواْ بِعِبَادَتِهِمْ كَـٰفِرِينَ ۝٦﴾ [الأحقاف: 5-6].

“ಅಲ್ಲಾಹನ ಹೊರತು ಪುನರುತ್ಥಾನ ದಿನದವರೆಗೆ ತನಗೆ ಉತ್ತರ ನೀಡದವರನ್ನು ಕರೆದು ಪ್ರಾರ್ಥಿಸುವವನಿಗಿಂತಲೂ ದೊಡ್ಡ ಪಥಭ್ರಷ್ಟನು ಇನ್ನಾರಿರುವನು? ಅವರು ಇವರ ಪ್ರಾರ್ಥನೆಯ ಬಗ್ಗೆ ಅಲಕ್ಷ್ಯರಾಗಿರುವರು. ಮನುಷ್ಯರನ್ನು ಒಟ್ಟುಗೂಡಿಸಲಾಗುವ ಸಂದರ್ಭದಲ್ಲಿ ಅವರು ಇವರ ಶತ್ರುಗಳಾಗುವರು. ಇವರು ಅವರ ಆರಾಧನೆ ಮಾಡಿರುವುದನ್ನು ಅವರು ನಿಷೇಧಿಸುವರು." [ಕುರ್‌ಆನ್ 46:5–6]

﴿وَأَعْتَزِلُكُمْ وَمَا تَدْعُونَ مِن دُونِ ٱللَّهِ وَأَدْعُواْ رَبِّي عَسَىٰٓ أَلَّآ أَكُونَ بِدُعَآءِ رَبِّي شَقِيًّا ۝٤٨ فَلَمَّا ٱعْتَزَلَهُمْ وَمَا يَعْبُدُونَ مِن دُونِ ٱللَّهِ﴾ [مريم: 48-49].

"ನಾನು ನಿಮ್ಮನ್ನು ಮತ್ತು ಅಲ್ಲಾಹನ ಹೊರತು ನೀವು ಪ್ರಾರ್ಥಿಸುವವುಗಳನ್ನು ಬಿಟ್ಟುಬಿಡುವೆನು. ನಾನು ನನ್ನ ರಬ್ಬಿನೊಂದಿಗೆ ಮಾತ್ರ ಪ್ರಾರ್ಥಿಸುವೆನು. ನನ್ನ ರಬ್ಬಿನೊಂದಿಗೆ ಪ್ರಾರ್ಥಿಸುವುದರಿಂದಾಗಿ ನಾನೆಂದೂ ಭಾಗ್ಯಹೀನನಾಗಿ ಬಿಡಲಾರೆನು. ತರುವಾಯ ಅವರು (ಇಬ್ರಾಹೀಮ್)

ಅವರನ್ನೂ, ಅಲ್ಲಾಹನ ಹೊರತು ಅವರು ಆರಾಧಿಸುವವುಗಳನ್ನೂ ಬಿಟ್ಟು ತೆರಳಿದಾಗ..." [ಕುರ್‌ಆನ್ 19:48–49]

ಪ್ರವಾದಿ(ﷺ) ಹೇಳುತ್ತಾರೆ:

{الدُّعَاءُ هُوَ الْعِبَادَةُ} رواه الترمذي

"ಪ್ರಾರ್ಥನೆಯೇ ಆರಾಧನೆ." [ಅತ್ತಿರ್ಮಿದೀ] ಪ್ರಾರ್ಥನೆಯು ಆರಾಧನೆಯ ಸುಪ್ರಧಾನ ಭಾಗವೆಂದು ಈ ಹದೀಸ್ ತಿಳಿಸುತ್ತದೆ. ತನ್ನ ಹೊರತು ಇತರ ಯಾರೊಂದಿಗೆ ಪ್ರಾರ್ಥಿಸಬಾರದೆಂದು ಅಲ್ಲಾಹು ಕುರ್‌ಆನ್‌ನಲ್ಲಿ ಸ್ಪಷ್ಟಪಡಿಸಿದ್ದಾನೆ.

﴿وَأَنَّ ٱلْمَسَٰجِدَ لِلَّهِ فَلَا تَدْعُوا۟ مَعَ ٱللَّهِ أَحَدًا ١٨﴾ [الجن: 18].

"ಖಂಡಿತವಾಗಿಯೂ ಮಸೀದಿಗಳು ಅಲ್ಲಾಹನದ್ದು. ಆದ್ದರಿಂದ ಅಲ್ಲಾಹನೊಂದಿಗೆ ಇತರ ಯಾರನ್ನೂ ಕರೆದು ಪ್ರಾರ್ಥಿಸಬಾರದು." [ಕುರ್‌ಆನ್ 72:18]

ತನ್ನ ಹೊರತು ಬೇರೆಯವರೊಂದಿಗೆ ಪ್ರಾರ್ಥಿಸುವವನಿಗೆ ತಾನು ಎಂದಿಗೂ ಕ್ಷಮಿಸುವುದಿಲ್ಲವೆಂದು ಕೂಡ ಅಲ್ಲಾಹು ಸ್ಪಷ್ಟಪಡಿಸಿದ್ದಾನೆ." [ಅಸ್ಸೈಫುಲ್ ಮಸ್ಲೂಲ್ ಅಲಾ ಆಬಿದಿ ರ್ರಸೂಲ್ 131–132 ಸಂಕ್ಷಿಪ್ತವಾಗಿ]

ಅಲ್ಲಾಹನೊಂದಿಗೆ ಮಾತ್ರ ಪ್ರಾರ್ಥಿಸುವುದು ಕಡ್ಡಾಯವಾಗಿದೆ ಎಂಬುದಕ್ಕಿರುವ ಪುರಾವೆ ಇಬ್ನ್ ಅಬ್ಬಾಸ್(رضي الله عنهما)ರವರ ಹದೀಸ್. ಇದರಲ್ಲಿ ಪ್ರವಾದಿ(ﷺ)ರವರು ಹೇಳುತ್ತಾರೆ:

{إِذَا سَأَلْتَ فَاسْأَلِ اللَّهَ وَإِذَا اسْتَعَنْتَ فَاسْتَعِنْ بِاللَّهِ} رواه الترمذي

"ನೀನು ಪ್ರಾರ್ಥಿಸುವುದಾದರೆ ಅಲ್ಲಾಹನೊಂದಿಗೆ ಮಾತ್ರ ಪ್ರಾರ್ಥಿಸು. ನೀವು ಸಹಾಯ ಬೇಡುವುದಾದರೆ ಅಲ್ಲಾಹನೊಂದಿಗೆ ಮಾತ್ರ ಸಹಾಯ ಬೇಡು." [ಅತ್ತಿರ್ಮಿದೀ 2516]

ಒಂದು ವೇಳೆ ಅಲ್ಲಾಹು ಅಲ್ಲದವರಲ್ಲಿ ಪ್ರಾರ್ಥಿಸಬಹುದಾಗಿದ್ದರೆ ಪ್ರವಾದಿ(ﷺ)ರವರು ಹೀಗೆ ಹೇಳುತ್ತಿರಲಿಲ್ಲ. ಬದಲಾಗಿ ನನ್ನಲ್ಲಿ ಕೂಡ ಪ್ರಾರ್ಥಿಸಿರಿ, ನನ್ನೊಂದಿಗೆ ಕೂಡ ಸಹಾಯ ಬೇಡಿರಿ ಎನ್ನುತ್ತಿದ್ದರು.

ಅಬೂ ಹುರೈರಃ(رضي الله عنه)ರಿಂದ ವರದಿಯಾದ ಹದೀಸಿನಲ್ಲಿ ಪ್ರವಾದಿ(ﷺ) ಹೇಳುತ್ತಾರೆ:

{يَنْزِلُ رَبُّنَا تَبَارَكَ وَتَعَالَى كُلَّ لَيْلَةٍ إِلَى سَمَاءِ الدُّنْيَا حِينَ يَبْقَى ثُلُثُ اللَّيْلِ الْآخِرِ، يَقُولُ: مَنْ يَدْعُونِي فَأَسْتَجِيبَ لَهُ؟ مَنْ يَسْأَلُنِي فَأُعْطِيَهُ؟ مَنْ يَسْتَغْفِرُنِي فَأَغْفِرَ لَهُ؟} متفق عليه.

"ಪ್ರತಿ ರಾತ್ರಿಯ ಕೊನೆಯ ಮೂರನೆ ಒಂದು ಭಾಗವು ಉಳಿದಿರುವಾಗ ಅಲ್ಲಾಹು ಸಮೀಪದ ಆಕಾಶಕ್ಕೆ ಇಳಿದು ಬಂದು ಹೇಳುವನು: ನನ್ನೊಂದಿಗೆ ಪ್ರಾರ್ಥಿಸುವವರು ಯಾರು? ಅವನಿಗೆ ನಾನು ಉತ್ತರಕೊಡುವೆನು. ನನ್ನೊಂದಿಗೆ ಬೇಡುವವರು ಯಾರು? ಅವನಿಗೆ ನಾನು ದಯಪಾಲಿಸುವೆನು. ನನ್ನೊಂದಿಗೆ ಪಾಪಮುಕ್ತಿ ಬೇಡುವವರು ಯಾರು? ಅವನಿಗೆ ನಾನು ಪಾಪಮುಕ್ತಿ ನೀಡುವೆನು." [ಅಲ್‌ಬುಖಾರಿ 1145; ಮುಸ್ಲಿಮ್ 1772]

ಪ್ರವಾದಿ (ﷺ) ಹೇಳಿದರು:

{إِذَا تَمَنَّى أَحَدُكُمْ فَلْيَسْتَكْثِرْ، فَإِنَّمَا يُسْأَلُ رَبُّهُ عَزَّ وَجَلَّ} رواه ابن أبي شيبة

“ನಿಮ್ಮಲ್ಲೊಬ್ಬನು ಏನಾದರೂ ಆಸೆಪಟ್ಟರೆ ಅವನದನ್ನು ಅತಿಯೆಂದು ಭಾವಿಸಲಿ. ಆದರೆ ಅವನು ಬೇಡಬೇಕಾದುದು ಮಹಾಮಹಿಮನಾದ ಅವನ ರಬ್ಬಿನೊಂದಿಗೆ ಮಾತ್ರ.” [ಇಬ್ನ್ ಅಬೀ ಶೈಬಾ 29360]

ಅಲ್ಲಾಹು ಹೇಳುತ್ತಾನೆ:

﴿يَسۡـَٔلُهُۥ مَن فِي ٱلسَّمَٰوَٰتِ وَٱلۡأَرۡضِۚ﴾ [الرحمن: 29] .

“ಆಕಾಶಗಳಲ್ಲಿ ಮತ್ತು ಭೂಮಿಯಲ್ಲಿರುವವರೆಲ್ಲರೂ ಅವನೊಂದಿಗೆ ಬೇಡುತ್ತಿರುವರು.” [ಕುರ್‌ಆನ್ 55:29]

ಈ ಆಯತ್ತಿನ ವ್ಯಾಖ್ಯಾನದಲ್ಲಿ ಶೈಖ್ ಇಬ್ನ್ ಸಅ್‌ದೀ(ರಹ್ಮತುಲ್ಲಾಹಿ ಅಲೈಹಿ) ಹೇಳುತ್ತಾರೆ:

“ಅಲ್ಲಾಹು ಸ್ವಯಂ ಪರ್ಯಾಪ್ತನು. ಅವನಿಗೆ ಸೃಷ್ಟಿಯ ಯಾವುದೇ ಆವಶ್ಯಕತೆಯಿಲ್ಲ. ಅವನು ಅತ್ಯುದಾರಿ ಮತ್ತು ಮಹಾ ಔದಾರ್ಯವಂತ. ಎಲ್ಲ ಸೃಷ್ಟಿಗಳೂ ಅವನನ್ನೇ ಅವಲಂಬಿಸಿಕೊಂಡಿದ್ದಾರೆ. ಅವರು ತಮ್ಮೆಲ್ಲ ಅಗತ್ಯಗಳನ್ನು ಅವನೊಂದಿಗೆ ಬೇಡಿಕೊಳ್ಳುತ್ತಾರೆ. ಅಲ್ಲಾಹನ ಆವಶ್ಯಕತೆಯಿಲ್ಲದೆ ಒಂದು ಕ್ಷಣ ಕೂಡ ಬದುಕಲು ಅವರಿಗೆ ಸಾಧ್ಯವಿಲ್ಲ. ಅಲ್ಲಾಹು ಪ್ರತಿಕ್ಷಣವೂ ಕಾರ್ಯಪ್ರವೃತ್ತನು. ಬಡವನನ್ನು ಶ್ರೀಮಂತನನ್ನಾಗಿ ಮಾಡುತ್ತಾನೆ, ರೋಗಿಯನ್ನು ಆರೋಗ್ಯವಂತನನ್ನಾಗಿ ಮಾಡುತ್ತಾನೆ,

ಕೆಲವರಿಗೆ ಸಂಪತ್ತು ಕೊಡುತ್ತಾನೆ, ಕೆಲವರಿಗೆ ಅದನ್ನು ತಡೆಹಿಡಿಯುತ್ತಾನೆ, ಮರಣವನ್ನು ನೀಡುತ್ತಾನೆ, ಜೀವವನ್ನು ನೀಡುತ್ತಾನೆ, ಪದವಿಗಳನ್ನು ಏರಿಸುತ್ತಾನೆ, ಪದವಿಗಳನ್ನು ಇಳಿಸುತ್ತಾನೆ, ಹೀಗೆ ಅವನು ಪ್ರತಿಕ್ಷಣದಲ್ಲೂ ಯಾವುದಾದರೂ ಕಾರ್ಯದಲ್ಲಿ ಮಗ್ನನಾಗಿರುತ್ತಾನೆ. ಆದರೂ ಅವನು ಯಾವುದೇ ಪ್ರಮಾದವೆಸಗುವುದಿಲ್ಲ. ಜನರು ಅವನೊಂದಿಗೆ ಎಷ್ಟೇ ಬೇಡಿಕೊಂಡರೂ, ಪದೇ ಪದೇ ಬೇಡಿಕೊಂಡರೂ ಅವನು ಕೋಪಿಸುವುದಿಲ್ಲ, ಉದಾಸೀನನಾಗುವುದಿಲ್ಲ. ಸರ್ವ ನ್ಯೂನತೆಗಳಿಂದಲೂ ಮುಕ್ತನಾಗಿರುವ ಅವನು ಅತ್ಯುದಾರಿ. ಅವನ ಔದಾರ್ಯವು ಸರ್ವ ಸೃಷ್ಟಿಗಳನ್ನೂ ಆವರಿಸಿಕೊಂಡಿದೆ, ಸಾರ್ವತ್ರಿಕವೂ ಸಾರ್ವಕಾಲಿಕವೂ ಆಗಿದೆ. ಅವನ ಅನುಕಂಪವು ಸರ್ವ ಸೃಷ್ಟಿಗಳನ್ನೂ ಆವರಿಸಿಕೊಂಡಿದೆ. ಅದು ಸಾರ್ವತ್ರಿಕವೂ ಸಾರ್ವಕಾಲಿಕವೂ ಆಗಿದೆ. ಜನರು ಪಾಪವೆಸಗುತ್ತಾರೆ ಮತ್ತು ಅವನ ಆಜ್ಞೆಗಳನ್ನು ಉಲ್ಲಂಘಿಸುತ್ತಾರೆ ಎಂಬ ಕಾರಣದಿಂದ ಅವನು ಅವರಿಗೆ ಕೊಡದೆ ಇರುವುದಿಲ್ಲ. ಅವನ ಆವಶ್ಯಕತೆಯಿಲ್ಲವೆಂದು ಸಾರುವ ಪರಮ ಅಜ್ಞಾನಿಗಳಿಗೂ ಅವನು ಇಲ್ಲವೆನ್ನುವುದಿಲ್ಲ".

## ಉಲಮಾಗಳು ಏನೆನ್ನುತ್ತಾರೆ?

ಪ್ರಸಿದ್ಧ ಹನಫೀ ವಿದ್ವಾಂಸರಾದ ಶೈಖ್ ಕಾಸಿಮ್(ﷺ) ತಮ್ಮ ದುರರುಲ್ ಬಿಹಾರ್ ಎಂಬ ಗ್ರಂಥದಲ್ಲಿ ಹೇಳುತ್ತಾರೆ:

النَّذْرُ الَّذِي يَقَعُ مِنْ أَكْثَرِ الْعَوَّامِ ، بِأَنْ يَأْتِيَ إِلَى قَبْرِ بَعْضِ الصُّلَحَاءِ قَائِلًا : يَا سَيِّدِي ؛ إِنْ رُدَّ غَائِبِي ، أَوْ عُوفِيَ مَرِيضِي ، أَوْ قُضِيَتْ حَاجَتِي ؛ فَلَكَ مِنَ الذَّهَبِ أَوِ الطَّعَامِ أَوِ الشَّمْعِ كَذَا وَكَذَا ؛ بَاطِلٌ إِجْمَاعًا ، لِوُجُوهٍ

مِنْهَا : أَنَّ النَّذْرَ لِلْمَخْلُوقِ لَا يَجُوزُ . وَمِنْهَا ، أَنَّهُ ظَنَّ أَنَّ الْمَيِّتَ يَتَصَرَّفُ فِي الْأَمْرِ ، وَاعْتِقَادُ هَذَا كُفْرٌ .

“ಜನಸಾಮಾನ್ಯರಲ್ಲಿ ಹೆಚ್ಚಿನವರು ಹೊರುವ ಹರಕೆಗಳು, ಅಂದರೆ ಕೆಲವು ಸಜ್ಜನರ ಗೋರಿಗಳ ಬಳಿಗೆ ಹೋಗಿ, ಓ ಸಯ್ಯಿದರೇ, ನಾನು ಕಳೆದುಕೊಂಡ ವಸ್ತು ಮರಳಿ ಸಿಕ್ಕಿದರೆ, ನನ್ನ ರೋಗ ವಾಸಿಯಾದರೆ, ನನ್ನ ಆಸೆ ಈಡೇರಿದರೆ, ತಮಗೆ ಚಿನ್ನವನ್ನು ಅಥವಾ ಆಹಾರವನ್ನು ಅಥವಾ ಮೋಂಬತ್ತಿಯನ್ನು ಕೊಡುವೆನು. ವಿದ್ವಾಂಸರ ಒಮ್ಮತಾಭಿಪ್ರಾಯ ಪ್ರಕಾರ ಇಂತಹ ಹರಕೆಗಳು ಅಸಿಂಧು. ಯಾಕೆಂದರೆ, ಸೃಷ್ಟಿಗಳ ಮೇಲೆ ಹರಕೆ ಹೊರುವುದಕ್ಕೆ ಅನುಮತಿಯಿಲ್ಲ. ಅದೇ ರೀತಿ ಮರಣಹೊಂದಿದವರು ಅಲ್ಲಾಹನ ವಿಷಯದಲ್ಲಿ ಹಸ್ತಕ್ಷೇಪ ಮಾಡುತ್ತಾರೆಂಬ ನಂಬಿಕೆಯೂ ಇದರಲ್ಲಿದೆ. ಇಂತಹ ನಂಬಿಕೆ ಕುಫ್ರ್ ಆಗಿದೆ”.

ಶೈಖ್ ಮುಹಮ್ಮದ್ ಆಬಿದ್ ಅಸ್ಸನದೀ ಅಲ್‌ಹನಫೀ(ﷺ) ತಮ್ಮ ತವಾಲಿಉಲ್ ಅನ್ವಾರ್ ಶರ್ಹ್ ತನ್ವೀರಿಲ್ ಅಬ್ಸಾರ್ ಮಲಅದ್ದುರ್ರಿಲ್ ಮುಖ್ತಾರ್ ಎಂಬ ಗ್ರಂಥದಲ್ಲಿ ಹೇಳುತ್ತಾರೆ:

وَلَا يَقُولُ : يَا صَاحِبَ الْقَبْرِ ، يَا فُلَانُ ، اِقْضِ حَاجَتِي ، أَوْ سَلْهَا مِنَ اللَّهِ ، أَوْ كُنْ لِي شَفِيعًا عِنْدَ اللَّهِ ، بَلْ يَقُولُ : يَا مَنْ لَا يُشْرِكُ فِي حُكْمِهِ أَحَدًا ؛ اقْضِ لِي حَاجَتِي هَذِهِ .

“ಓ ಗೋರಿಯಲ್ಲಿರುವವರೇ, ಓ ಇಂತಿಂತಹವರೇ, ನನ್ನ ಆಸೆಯನ್ನು ಈಡೇರಿಸಿ, ಅಥವಾ ಅದನ್ನು ಅಲ್ಲಾಹನಿಂದ ಕೇಳಿ ಕೊಡಿ, ಅಥವಾ ಅಲ್ಲಾಹನ ಬಳಿ ನನ್ನ ಬಗ್ಗೆ ಶಿಫಾರಸು ಮಾಡಿ ಎಂದು ಹೇಳಬಾರದು.

ಬದಲಾಗಿ ತನ್ನ ತೀರ್ಮಾನದಲ್ಲಿ ಯಾರನ್ನೂ ಸಹಭಾಗಿಯಾಗಿ ಮಾಡಿಕೊಳ್ಳದ ಓ ಅಲ್ಲಾಹನೇ, ನನ್ನ ಆಸೆಯನ್ನು ಈಡೇರಿಸು ಎಂದು ಹೇಳಬೇಕು".

ಶೈಖ್ ಸನ್‌ಉಲ್ಲಾಹ್ ಇಬ್ನ್ ಸನ್‌ಉಲ್ಲಾಹ್ ಅಲ್‌ಹಲಬೀ ಅಲ್‌ಹನಫೀ (ﷺ) ಹೇಳುತ್ತಾರೆ:

هَذَا وَإِنَّهُ قَدْ ظَهَرَ الْآنَ فِيمَا بَيْنَ الْمُسْلِمِينَ جَمَاعَاتٌ يَدَّعُونَ أَنَّ لِلْأَوْلِيَاءِ تَصَرُّفَاتٍ فِي حَيَاتِهِمْ وَبَعْدَ الْمَمَاتِ ، وَيُسْتَغَاثُ بِهِمْ فِي الشَّدَائِدِ وَالْبَلِيَّاتِ ، وَبِهِمْ تَنْكَشِفُ الْمُهِمَّاتُ ، فَيَأْتُونَ قُبُورَهُمْ وَيُنَادُونَهُمْ فِي قَضَاءِ الْحَاجَاتِ ، مُسْتَدِلِّينَ عَلَى أَنَّ ذَلِكَ مِنْهُمْ كَرَامَاتٌ!

وَهَذَا كَلَامٌ فِيهِ تَفْرِيطٌ وَإِفْرَاطٌ ، بَلْ فِيهِ الْهَلَاكُ الْأَبَدِيُّ وَالْعَذَابُ السَّرْمَدِيُّ ، لِمَا فِيهِ مِنْ رَوَائِحِ الشِّرْكِ الْمُحَقَّقِ ، وَمُصَادَرَةُ الْكِتَابِ الْعَزِيزِ الْمُصَدَّقِ ، وَمُخَالَفَةٌ لِعَقَائِدِ الْأَئِمَّةِ ، وَمَا أَجْمَعَتْ عَلَيْهِ هَذِهِ الْأُمَّةُ ، وَفِي التَّنْزِيلِ:

﴿وَمَن يُشَاقِقِ ٱلرَّسُولَ مِنۢ بَعۡدِ مَا تَبَيَّنَ لَهُ ٱلۡهُدَىٰ وَيَتَّبِعۡ غَيۡرَ سَبِيلِ ٱلۡمُؤۡمِنِينَ نُوَلِّهِۦ مَا تَوَلَّىٰ وَنُصۡلِهِۦ جَهَنَّمَۖ وَسَآءَتۡ مَصِيرًا ١١٥﴾

[النساء: 115] .

"ಈ ಕಾಲದಲ್ಲಿ ಮುಸ್ಲಿಮರ ನಡುವೆ ಕೆಲವು ಗುಂಪುಗಳು ಹುಟ್ಟಿಕೊಂಡಿವೆ. ಬದುಕಿರುವಾಗಲೂ ಮರಣಾನಂತರವೂ ಔಲಿಯಾಗಳಿಗೆ

ಪ್ರಪಂಚದ ಮೇಲೆ ನಿಯಂತ್ರಣವಿದೆಯೆಂದು ಅವರು ವಾದಿಸುತ್ತಾರೆ. ಕಷ್ಟ, ಆಪತ್ತು ಬರುವಾಗ ಆ ಔಲಿಯಾಗಳೊಂದಿಗೆ ಅವರು ಸಹಾಯ ಬೇಡುತ್ತಾರೆ. ಅವರಿಂದಾಗಿ ಕಷ್ಟಗಳು ನಿವಾರಣೆಯಾಗುತ್ತವೆ ಎಂದು ನಂಬುತ್ತಾರೆ. ಆದ್ದರಿಂದ ಅವರು ಆ ಔಲಿಯಾಗಳ ಗೋರಿಗಳಿಗೆ ತೆರಳಿ ಬಯಕೆಗಳನ್ನು ಪೂರ್ಯೈಸಿಕೊಡುವಂತೆ ಪ್ರಾರ್ಥಿಸುತ್ತಾರೆ. ಇದಕ್ಕೆ ಪುರಾವೆಯಾಗಿ ಅವರು ಔಲಿಯಾಗಳ ಕರಾಮತ್‌ಗಳನ್ನು ತೋರಿಸುತ್ತಾರೆ. ಇವರು ಹೇಳುವ ಈ ಮಾತುಗಳಲ್ಲಿ ಅಪೂರ್ಣತೆಯೂ ಹದ್ದು ಮೀರುವಿಕೆಯೂ ಇದೆ. ಮಾತ್ರವಲ್ಲ, ಶಾಶ್ವತವಾದ ನಾಶ ಮತ್ತು ಶಾಶ್ವತವಾದ ಶಿಕ್ಷೆಯೂ ಇದೆ. ಯಾಕೆಂದರೆ ಈ ಮಾತುಗಳಲ್ಲಿ ಶಿರ್ಕ್‌ನ ವಾಸನೆಯಿದೆ. ಕುರ್‌ಆನಿಗೆ ವಿರುದ್ಧವಾದ ಉಲ್ಲೇಖಗಳಿವೆ. ಮದ್‌ಹಬಿನ ಇಮಾಮ್‌ಗಳ ವಿಶ್ವಾಸಕ್ಕೆ ಮತ್ತು ಮುಸ್ಲಿಮ್ ಸಮುದಾಯವು ಒಮ್ಮತಾಭಿಪ್ರಾಯದಲ್ಲಿರುವ ವಿಶ್ವಾಸಕ್ಕೆ ವಿರುದ್ಧವಾದ ವಿಶ್ವಾಸಗಳಿವೆ. ಅಲ್ಲಾಹು ಹೇಳುತ್ತಾನೆ: ಸನ್ಮಾರ್ಗವು ಸ್ಪಷ್ಟವಾದ ಬಳಿಕ ರಸೂಲ್‌ರವರಿಗೆ ವಿರುದ್ಧವಾಗಿ ಚಲಿಸುವವರು ಮತ್ತು ವಿಶ್ವಾಸಿಗಳದ್ದಲ್ಲದ ಮಾರ್ಗದಲ್ಲಿ ಚಲಿಸುವವರು ಯಾರೋ ಅವರನ್ನು ನಾವು ಅವರು ತಿರುಗಿದ ಮಾರ್ಗದೆಡೆಗೆ ತಿರುಗಿಸುವೆವು ಮತ್ತು ನರಕಾಗ್ನಿಯಲ್ಲಿ ಸುಡುವೆವು. ಅದೆಷ್ಟು ನಿಕೃಷ್ಟ ತಲುಪುದಾಣ!" [ಕುರ್‌ಆನ್ 4:115] [ಸೈಫುಲ್ಲಾಹ್ ಅಲಾ ಮನ್ ಕದಬ ಅಲಾ ಔಲಿಯಾಇಲ್ಲಾಹ್ ಪುಟ 15–16]

ಇತ್ತೀಚಿನ ಹನಫೀ ವಿದ್ವಾಂಸರಾದ ಇಮಾಮ್ ಅಹ್ಮದ್ ಅಸ್ಸರ್‌ಹಿಂದೀ, ಇಮಾಮ್ ಅಹ್ಮದ್ ಅರ್ರೂಮೀ, ಶೈಖ್ ಸಿಜಾನ್ ಬಖ್ಷ್ ಅಲ್‌ಹಿಂದೀ, ಮುಹಮ್ಮದ್ ಇಬ್ನ್ ಅಲೀ ಅತ್ತಾನವೀ, ಮುಹಮ್ಮದ್ ಇಸ್ಮಾಈಲ್ ಅದ್ದಹ್ಲವೀ, ಶೈಖ್ ಅಬುಲ್ ಹಸನ್ ಅನ್ನದ್ವೀ ಮೊದಲಾದವರು ಕೂಡ ಅಲ್ಲಾಹು ಅಲ್ಲದವರೊಂದಿಗೆ ಪ್ರಾರ್ಥಿಸುವುದನ್ನು ಕಠಿಣವಾಗಿ ವಿರೋಧಿಸಿದ್ದಾರೆ. [ಅಲ್‌ಮಜ್ಮೂಉಲ್ ಮುಫೀದ್ ಫೀ ನಕ್ದಿಲ್ ಕುಬೂರಿಯ್ಯತಿ ವನುಸ್ರತಿ ತೌಹೀದ್]

ಶೈಖ್ ಡಾ। ಶಮ್ಸುದ್ದೀನ್ ಅಲ್‍ಅಫ್ಘಾನೀ (ﷺ) ಈ ವಿಷಯದಲ್ಲಿ ಒಂದು ದೊಡ್ಡ ಪ್ರಬಂಧವನ್ನು ರಚಿಸಿದ್ದಾರೆ. ಜುಹೂದು ಉಲಮಾಇಲ್ ಹನಫಿಯ್ಯಃ ಫೀ ಇಬ್ತಾಲಿ ಅಕಾಇದಿಲ್ ಕುಬೂರಿಯ್ಯಃ ಎಂಬ ಹೆಸರಿನ ಮೂರು ಭಾಗಗಳಲ್ಲಿರುವ ಈ ಪ್ರಬಂಧವು ಕುಬೂರಿ ವಿಶ್ವಾಸಗಳ ಬಗ್ಗೆ ಹನಫೀ ಉಲಮಾಗಳ ಅಭಿಪ್ರಾಯಗಳನ್ನು ಒಳಗೊಂಡಿದೆ. ಈ ಪ್ರಬಂಧಕ್ಕೆ ಅವರಿಗೆ ಡಾಕ್ಟರೇಟ್ ಪದವಿ ಕೂಡ ಲಭ್ಯವಾಗಿದೆ.

ಇಮಾಮ್ ಅಬೂ ಬಕರ್ ಅತ್ತುರ್ತೂಶೀ (ﷺ) ತಮ್ಮ ಅಲ್‍ಹವಾದಿಸು ವಲ್‍ಬಿದಅ್ ಎಂಬ ಗ್ರಂಥದಲ್ಲಿ ದಾತು ಅನ್ವಾತ್ ಎಂಬ ಮರದ ಬಗ್ಗೆ ವರದಿಯಾದ ಹದೀಸಿನ ವಿಷಯದಲ್ಲಿ ಹೇಳುತ್ತಾರೆ:

فَانْظُرُوا رَحِمَكُمُ اللَّهُ أَيْنَمَا وَجَدْتُمْ سِدْرَةً أَوْ شَجَرَةً يَقْصِدُهَا النَّاسُ ، وَيُعَظِّمُونَ مِنْ شَأْنِهَا ، وَيَرْجُونَ الْبُرْءَ وَالشِّفَاءَ لِمَرْضَاهُمْ مِنْ قِبَلِهَا ؛ وَيُنَوِّطُونَ بِهَا الْمَسَامِيرَ وَالْخِرَقَ ؛ فَهِيَ ذَاتُ أَنْوَاطٍ ، فَاقْطَعُوهَا.

“ಅಲ್ಲಾಹು ನಿಮ್ಮ ಮೇಲೆ ಕರುಣೆ ತೋರಲಿ. ಜನರು ಉದ್ದೇಶವಿಟ್ಟು ತೆರಳುವ, ಮಹತ್ವ ಕಲ್ಪಿಸುವ, ಕಾಯಿಲೆ ವಾಸಿಯಾಗಬೇಕೆಂದು ಮತ್ತು ರೋಗ ಗುಣವಾಗಬೇಕೆಂದು ಆಶಿಸುವ ಮತ್ತು ಮೊಳೆ, ಬಟ್ಟೆಚೂರುಗಳನ್ನು ತೂಗು ಹಾಕುವಂತಹ ಒಂದು ಮರವನ್ನು ಕಂಡರೆ ತಕ್ಷಣ ಅದನ್ನು ಕಡಿದು ಹಾಕಿರಿ. ಅದೇ ದಾತು ಅನ್ವಾತ್.” [ಅಲ್‍ಹವಾದಿಸು ವಲ್‍ಬಿದಅ್ ಪುಟ 39]

ಇಬ್ನ್ ಹಜರ್ ಅಲ್‍ಹೈತಮೀ ಅಶ್ಶಾಫಿಈ (ﷺ) ತಮ್ಮ ಶರ್ಹುಲ್ ಅರ್ಬಈನ ನ್ನವವಿಯ್ಯಃ ಎಂಬ ಗ್ರಂಥದಲ್ಲಿ ಹೇಳುತ್ತಾರೆ:

مَنْ دَعَا غَيْرَ اللَّهِ فَهُوَ كَافِرٌ

"ಅಲ್ಲಾಹು ಅಲ್ಲದವರನ್ನು ಕರೆದು ಪ್ರಾರ್ಥಿಸುವವನು ಕಾಫಿರ್." [ನೋಡಿ: ಅಶ್ಶೌಕಾನಿಯವರ ಅದ್ದುರ್ರು ನ್ನದೀದ್]

ಮುಹದ್ದಿಸು ಶ್ಶಾಮ್ ಎಂದೇ ಪ್ರಸಿದ್ಧರಾದ ಇಮಾಮ್ ಅಬೂ ಶಾಮಃ (ﷺ) ತಮ್ಮ ಅಲ್‌ಬಾಇಸ್ ಅಲಾ ಇನ್ಕಾರಿಲ್ ಬಿದಇ ವಲ್ ಹವಾದಿಸ್ ಎಂಬ ಗ್ರಂಥದಲ್ಲಿ ಹೇಳುತ್ತಾರೆ:

لَكِنْ نُبَيِّنُ مِنْ هَذَا الْقِسْمِ مَا وَقَعَ فِيهِ جَمَاعَةٌ مِنْ جُهَّالِ الْعَوَّامِ ، الْمُنَابِذِينَ لِشَرِيعَةِ الْإِسْلَامِ ، التَّارِكِينَ لِلِاقْتِدَاءِ بِأَئِمَّةِ الدِّينِ مِنَ الْفُقَهَاءِ ، وَهُوَ مَا يَفْعَلُهُ طَوَائِفُ مِنَ الْمُنْتَمِينَ إِلَى الْفَقْرِ ، الَّذِي حَقِيقَتُهُ الِافْتِقَارُ مِنَ الْإِيمَانِ. . . ، وَبِهَذِهِ الطُّرُقِ وَأَمْثَالِهَا كَانَ مَبَادِئُ ظُهُورِ الْكُفْرِ مِنْ عِبَادَةِ الْأَصْنَامِ وَغَيْرِهَا ، وَمِنْ هَذَا الْقِسْمِ أَيْضًا مَا قَدْ عَمَّ الِابْتِلَاءُ بِهِ ؛ مِنْ تَزْيِينِ الشَّيْطَانِ لِلْعَامَّةِ تَخْلِيقَ الْحِيطَانِ وَالْعُمُدِ ، وَسَرْجُ مَوَاضِعَ مَخْصُوصَةٍ فِي كُلِّ بَلَدٍ يَحْكِي لَهُمْ حَاكٍ أَنَّهُ رَأَى فِي مَنَامِهِ بِهَا أَحَدًا مِمَّنْ شُهِرَ بِالصَّلَاحِ وَالْوِلَايَةِ ، إِلَى أَنْ يَعْظُمَ وَقْعَ تِلْكَ الْأَمَاكِنِ فِي قُلُوبِهِمْ ، وَيُعَظِّمُونَهَا ، وَيَرْجُونَ الشِّفَاءَ لِمَرْضَاهُمْ ، وَقَضَاءَ حَوَائِجِهِمْ بِالنَّذْرِ لَهَا

"ಆದರೆ ನಾವು (ಗ್ರಂಥದ) ಈ ಭಾಗದಲ್ಲಿ ಇಸ್ಲಾಮೀ ಶರೀಅತ್ತನ್ನು ತಿರಸ್ಕರಿಸಿದ ಮತ್ತು ಧರ್ಮದ ಇಮಾಮ್‌ಗಳಾದ ಕರ್ಮಶಾಸ್ತ್ರಜ್ಞರನ್ನು ತೊರೆದ ಕೆಲವು ಅಜ್ಞಾನಿ ಜನರ ಗುಂಪುಗಳು ಮಾಡುವ ಕರ್ಮಗಳ ಬಗ್ಗೆ

ವಿವರಿಸುವೆವು. ಇದು ಬಡವರಾಗಿರುವ ಜನರಲ್ಲೇ ಹೆಚ್ಚಾಗಿ ಕಂಡು ಬರುವ ಕರ್ಮಗಳಾಗವೆ. ಅಂದರೆ ಇದರ ನಿಜವಾದ ಅರ್ಥ ವಿಶ್ವಾಸದಲ್ಲಿ ಬಡವರಾಗಿರುವವರು.... ಇಂತಹ ಕರ್ಮಗಳ ಕಾರಣದಿಂದಲೇ ವಿಗ್ರಹಾರಾಧನೆ ಮೊದಲಾದ ಶಿರ್ಕ್‌ಗಳು ಆರಂಭವಾದವು. ಇಂದು ಜನರಲ್ಲಿ ವ್ಯಾಪಕವಾಗಿ ಹರಡಿಕೊಂಡಿರುವ ವಿಪತ್ತೇನೆಂದರೆ ಗೋಡೆ ಕಂಬಗಳಿಂದ ನಿರ್ಮಿಸಲ್ಪಟ್ಟ, ದೀಪಗಳಿಂದ ಅಲಂಕರಿಸಲಾದ ಕೆಲವು ವಿಶೇಷ ಸ್ಥಳಗಳು. ಜನಸಾಮಾನ್ಯರಿಗೆ ಶೈತಾನನು ಈ ಸ್ಥಳಗಳನ್ನು ಅಲಂಕಾರಗೊಳಿಸಿ ತೋರಿಸುತ್ತಾನೆ. ಎಲ್ಲ ಊರುಗಳಲ್ಲೂ ಇರುವ ಕೆಲವು ಕಥೆಗಾರರು ತಾನು ಕನಸಿನಲ್ಲಿ ಇಂತಿಂತಹ ಒಬ್ಬ ಪ್ರಸಿದ್ಧ ಔಲಿಯಾನನ್ನು ಕಂಡಿದ್ದೇನೆ ಎನ್ನುತ್ತಾ ಆ ಸ್ಥಳಗಳ ಬಗ್ಗೆ ಜನರ ಮನಸ್ಸಿನಲ್ಲಿ ಮಹತ್ವವನ್ನು ಹಾಕುತ್ತಾನೆ. ಜನರು ಆ ಸ್ಥಳಗಳನ್ನು ಗೌರವಿಸಲು ತೊಡಗುತ್ತಾರೆ ಮತ್ತು ತಮ್ಮ ರೋಗಗಳು ವಾಸಿಯಾಗುವಂತೆ, ಆಸೆ ಈಡೇರುವಂತೆ ಅಲ್ಲಿಗೆ ಹರಕೆ ಹೊರುತ್ತಾರೆ." [ಅಲ್‌ಬಾಇಸ್ ಅಲಾ ಇನ್ಕಾರಿಲ್ ಬಿದಇ ವಲ್ ಹವಾದಿಸ್ ಪುಟ 34–35]

ಇಮಾಮ್ ಅಹ್ಮದ್ ಇಬ್ನ್ ಅಲೀ ಅಲ್‌ಮಕ್ರೀಝೀ ಅಲ್‌ಮಿಸ್ರೀ ಅಶ್ಶಾಫಿಈ (ﷺ) ಹೇಳುತ್ತಾರೆ:

وَشِرْكُ الْأُمَمِ كُلُّهُ نَوْعَانِ : شِرْكٌ فِي الْإِلَهِيَّةِ وَشِرْكٌ فِي الرُّبُوبِيَّةِ ، فَالشِّرْكُ فِي الْإِلَهِيَّةِ وَالْعِبَادَةِ هُوَ الْغَالِبُ عَلَى أَهْلِ الْإِشْرَاكِ ، وَهُوَ شِرْكُ عُبَّادِ الْأَصْنَامِ وَعُبَّادِ الْمَلَائِكَةِ وَعُبَّادِ الْجِنِّ وَعُبَّادِ الْمَشَايِخِ وَالصَّالِحِينَ الْأَحْيَاءِ وَالْأَمْوَاتِ ، الَّذِينَ قَالُوا إِنَّمَا نَعْبُدُهُمْ لِيُقَرِّبُونَا إِلَى اللَّهِ زُلْفَى ، وَيَشْفَعُوا لَنَا عِنْدَهُ ، وَيَنَالُونَا بِسَبَبِ قُرْبِهِمْ مِنَ اللَّهِ وَكَرَامَتِهِ لَهُمْ قُرْبًا

وَكَرَامَةً ، كَمَا هُوَ الْمَعْهُودُ فِي الدُّنْيَا مِنْ حُصُولِ الْكَرَامَةِ وَالزُّلْفَى لِمَنْ يَخْدِمُ أَعْوَانَ الْمَلِكِ وَأَقَارِبَهُ خَاصَّتَهُ .

وَالْكُتُبُ الْإِلَهِيَّةُ كُلُّهَا مِنْ أَوَّلِهَا إِلَى آخِرِهَا تُبْطِلُ هَذَا الْمَذْهَبَ وَتَرُدُّهُ وَتُقَبِّحُ أَهْلَهُ ، وَتَنُصُّ عَلَى أَنَّهُمْ أَعْدَاءُ اللَّهِ تَعَالَى . وَجَمِيعُ الرُّسُلِ صَلَوَاتُ اللَّهِ عَلَيْهِمْ مُتَّفِقُونَ عَلَى ذَلِكَ مِنْ أَوَّلِهِمْ إِلَى آخِرِهِمْ ، وَمَا أَهْلَكَ اللَّهُ تَعَالَى مَنْ أَهْلَكَ مِنَ الْأُمَمِ إِلَّا بِسَبَبِ هَذَا الشِّرْكِ وَمِنْ أَجْلِهِ

“ಜನರು ಮಾಡುವ ಶಿರ್ಕ್ ಎರಡು ವಿಧದಲ್ಲಿದೆ: ಉಲೂಹಿಯ್ಯತ್ತಿನಲ್ಲಿರುವ ಶಿರ್ಕ್ ಮತ್ತು ರುಬೂಬಿಯ್ಯತ್ತಿನಲ್ಲಿರುವ ಶಿರ್ಕ್. ಉಲೂಹಿಯ್ಯತ್ತಿನಲ್ಲಿರುವ ಅಥವಾ ಆರಾಧನೆಯ ವಿಷಯದಲ್ಲಿರುವ ಶಿರ್ಕ್ ಜನರಲ್ಲಿ ಹೆಚ್ಚಾಗಿ ಕಾಣುವ ಶಿರ್ಕ್ ಆಗಿದೆ. ಅದು ವಿಗ್ರಹಗಳನ್ನು ಆರಾಧಿಸುವವರು, ಮಲಕ್‌ಗಳನ್ನು ಆರಾಧಿಸುವವರು, ಜಿನ್ನ್‌ಗಳನ್ನು ಆರಾಧಿಸುವವರು, ಜೀವಂತವಿರುವ ಮತ್ತು ಮರಣಹೊಂದಿರುವ ಸಜ್ಜನರನ್ನು ಆರಾಧಿಸುವವರು ಮಾಡುವ ಶಿರ್ಕ್. ನಾವು ಅವರನ್ನು ಆರಾಧಿಸುವುದು ಅವರು ನಮ್ಮನ್ನು ಅಲ್ಲಾಹನಿಗೆ ಸಮೀಪಗೊಳಿಸುತ್ತಾರೆ, ನಮ್ಮ ಬಗ್ಗೆ ಅಲ್ಲಾಹನ ಬಳಿ ಶಿಫಾರಸು ಮಾಡುತ್ತಾರೆ ಮತ್ತು ಅಲ್ಲಾಹನ ಬಳಿ ಅವರಿಗಿರುವ ಸಾಮೀಪ್ಯ ಮತ್ತು ಗೌರವದ ಮೂಲಕ ನಮಗೂ ಅಲ್ಲಾಹನ ಸಾಮೀಪ್ಯ ಮತ್ತು ಗೌರವ ಗಳಿಸಿಕೊಡುತ್ತಾರೆ ಎಂದು ಅವರು ಹೇಳುತ್ತಾರೆ. ಅದು ಹೇಗೆಂದರೆ ನಾವೀಗ ಇಹಲೋಕದಲ್ಲಿ ಕಾಣುತ್ತಿರುವಂತೆ ಒಬ್ಬ ರಾಜನ ಸಹಾಯಕರ, ಆತನ ಕುಟುಂಬದವರ ಮತ್ತು ಹಿತೈಷಿಗಳ ಸೇವೆ ಮಾಡಿದವನಿಗೆ ರಾಜನ ಸಾಮೀಪ್ಯ ಮತ್ತು ಗೌರವವು ಲಭ್ಯವಾಗುವಂತೆ ಎಂದು ಅವರು ಹೇಳುತ್ತಾರೆ. ಆದರೆ ಸರ್ವ ದೈವಿಕ

ಗ್ರಂಥಗಳು, ಆರಂಭದಿಂದ ಅಂತ್ಯದ ತನಕ ಈ ನಂಬಿಕೆಯನ್ನು ತಿರಸ್ಕರಿಸುತ್ತದೆ ಮತ್ತು ಇದನ್ನು ಮಾಡುವವರನ್ನು ಅತಿನಿಕೃಷ್ಟರನ್ನಾಗಿ ಕಾಣುತ್ತದೆ. ಈ ನಂಬಿಕೆಯನ್ನು ಹೊಂದಿರುವವರು ಅಲ್ಲಾಹನ ಶತ್ರುಗಳೆಂದೂ ಅವು ಸ್ಪಷ್ಟವಾಗಿ ಹೇಳುತ್ತವೆ. ಅಲ್ಲಾಹನ ಸರ್ವ ಪ್ರವಾದಿಗಳು, ಮೊಟ್ಟಮೊದಲ ಪ್ರವಾದಿಯಿಂದ ತೊಡಗಿ ಕಟ್ಟಕಡೆಯ ಪ್ರವಾದಿಯ ತನಕ, ಎಲ್ಲರೂ ಈ ವಿಷಯದಲ್ಲಿ ಒಮ್ಮತಾಭಿಪ್ರಾಯ ಹೊಂದಿದ್ದಾರೆ. ಅಲ್ಲಾಹು ಯಾವುದಾದರೂ ಸಮುದಾಯವನ್ನು ನಾಶ ಮಾಡಿದ್ದರೆ ಅದು ಈ ಶಿರ್ಕ್ ಮತ್ತು ಅದರ ಕಾರಣದಿಂದಲೇ ಹೊರತು ಬೇರಾವುದಕ್ಕೂ ಅಲ್ಲ." [ತಜ್ರೀದು ತೌಹೀದಿಲ್ ಮುಫೀದ್ ಪುಟ 52–53]

ಇಮಾಮ್ ಇಬ್ನ್ ಉಕೈಲ್ ಅಲ್‌ಹಂಬಲೀ (ﷺ) ಹೇಳುತ್ತಾರೆ:

إِنَّ مَنْ يُعَظِّمُ الْقُبُورَ وَيُخَاطِبُ الْمَوْتَى بِقَضَاءِ الْحَوَائِجِ ، وَيَقُولُ : يَا مَوْلَايَ وَيَا سَيِّدِي عَبْدَ الْقَادِرِ :افْعَلْ لِي كَذَا ؛ هُوَ كَافِرٌ بِهَذِهِ الْأَوْضَاعِ ، وَمَنْ دَعَا مَيِّتًا وَطَلَبَ قَضَاءَ الْحَوَائِجِ فَهُوَ كَافِرٌ

"ಗೋರಿಗಳನ್ನು ಮಹತ್ವಪಡಿಸುವವನು, ಆಸೆಯನ್ನು ಈಡೇರಿಸುವುದಕ್ಕಾಗಿ ಓ ನನ್ನ ರಕ್ಷಕರೇ, ಓ ಸಯ್ಯಿದ್ ಅಬ್ದುಲ್ ಕಾದಿರ್ ಜೀಲಾನಿಯವರೇ ಮುಂತಾಗಿ ನೇರವಾಗಿ ಮರಣಹೊಂದಿದವರೊಂದಿಗೆ ಮಾತನಾಡುವವನು ಕಾಫಿರ್ ಆಗಿದ್ದಾನೆ. ಮರಣಹೊಂದಿದವರನ್ನು ಕರೆದು ಅಗತ್ಯವನ್ನು ಪೂರೈಸಿಕೊಡುವಂತೆ ಬೇಡಿಕೆಯಿಡುವವನು ಕಾಫಿರ್ ಆಗಿದ್ದಾನೆ".

ಅವರು ತಮ್ಮ ಅಲ್‌ಫುನೂನ್ ಎಂಬ ಗ್ರಂಥದಲ್ಲಿ ಹೇಳುತ್ತಾರೆ:

لَمَّا صَعُبَتْ التَّكَالِيفُ عَلَى الْجُهَّالِ وَالطَّغَامِ ؛ عَدَلُوا عَنْ أَوْضَاعِ الشَّرْعِ إِلَى تَعْظِيمِ أَوْضَاعٍ وَضَعُوهَا ، فَسَهَّلَتْ عَلَيْهِمْ إِذْ لَمْ يَدْخُلُوا بِهَا تَحْتَ أَمْرِ غَيْرِهِمْ ، وَهُمْ عِنْدِي كُفَّارٌ بِهَذِهِ الْأَوْضَاعِ ، مِثْلِ تَعْظِيمِ الْقُبُورِ، وَخِطَابِ الْمَوْتَى بِالْحَوَائِجِ، وَكَتْبِ الرِّقَاعِ فِيهَا : يَا مَوْلَايَ، افْعَلْ لِي كَذَا وَكَذَا ، أَوْ إِلْقَاءِ الْخِرَقِ عَلَى الشَّجَرَةِ اقْتِدَاءً بِمَنْ عَبَدَ اللَّاتَ وَالْعُزَّى

“ಅಜ್ಞಾನಿಗಳ ಮತ್ತು ದುರುಳರಿಗೆ ಶರೀಅತ್ತಿನ ನಿಯಮಗಳನ್ನು ಅನುಸರಿಸಲು ಕಷ್ಟವಾದಾಗ ಅವರು ಶರೀಅತ್ತಿನ ನಿಯಮಗಳಿಂದ ಸರಿದು ತಾವೇ ರಚಿಸಿದ ನಿಯಮಗಳನ್ನು ಮಹತ್ವೀಕರಿಸತೊಡಗಿದರು. ಇದು ಅವರಿಗೆ ಸುಲಭವಾಯಿತು. ಯಾಕೆಂದರೆ ಈಗ ಅವರಿಗೆ ಯಾರದ್ದೇ ಆಜ್ಞೆಯನ್ನು ಪಾಲಿಸಬೇಕಾಗಿ ಬರುವುದಿಲ್ಲ. ಇಂತಹ ನಿಯಮಗಳನ್ನು ರಚಿಸಿದ ಕಾರಣ ನನ್ನ ಪ್ರಕಾರ ಅವರು ಕಾಫಿರ್‌ಗಳು. ಅವರ ನಿಯಮಗಳೇನೆಂದರೆ ಗೋರಿಗಳನ್ನು ಮಹತ್ವಪಡಿಸುವುದು, ಮರಣಹೊಂದಿದವರೊಂದಿಗೆ ಮಾತನಾಡುವುದು, ಬಟ್ಟೆ ಚೂರುಗಳಲ್ಲಿ ಓ ನನ್ನ ರಕ್ಷಕರೇ, ನನಗೆ ಇಂತಿಂತಹದ್ದನ್ನು ನೆರವೇಸಿರಿ ಕೊಡಿ ಎಂದು ಬರೆಯುವುದು, ಅಥವಾ ಅವುಗಳನ್ನು ಮರದ ಮೇಲೆ ತೂಗಿಸುವುದು. ಇದು ಲಾತ್ ಮತ್ತು ಉಝ್ಝಾಗಳನ್ನು ಆರಾಧಿಸುತ್ತಿದ್ದವರ ಅದೇ ಚರ್ಯೆಯಾಗಿದೆ.”

ಇಮಾಮ್ ಇಬ್ನ್ ರಜಬ್ ಅಲ್‌ಹಂಬಲೀ (ﷺ) ಹೇಳುತ್ತಾರೆ:

إِنَّ قَوْلَ الْعَبْدِ ( لَا إِلَهَ إِلَّا اللَّهُ ) يَقْتَضِي أَنَّهُ لَا إِلَهَ لَهُ غَيْرَ اللَّهِ ، وَالْإِلَهُ هُوَ الَّذِي يُطَاعُ فَلَا يُعْصَى ، هَيْبَةً لَهُ وَإِجْلَالًا ، وَمَحَبَّةً وَخَوْفًا وَرَجَاءً ، وَتَوَكُّلًا عَلَيْهِ وَسُؤَالًا مِنْهُ وَدُعَاءً لَهُ ، وَلَا يَصْلُحُ ذَلِكَ كُلُّهُ إِلَّا لِلَّهِ عَزَّ وَجَلَّ ، فَمَنْ أَشْرَكَ مَخْلُوقًا فِي شَيْءٍ مِنْ هَذِهِ الْأُمُورِ الَّتِي هِيَ مِنْ خَصَائِصِ الْإِلَهِيَّةِ ؛ كَانَ ذَلِكَ قَدَحًا فِي إِخْلَاصِهِ فِي قَوْلِ : ( لَا إِلَهَ إِلَّا اللَّهُ ) ، وَنَقْصًا فِي تَوْحِيدِهِ ، وَكَانَ فِيهِ مِنْ عُبُودِيَّةِ الْمَخْلُوقِ بِحَسَبِ مَا فِيهِ مِنْ ذَلِكَ ، وَهَذَا كُلُّهُ مِنْ فُرُوعِ الشِّرْكِ

"ಒಬ್ಬ ದಾಸ ಲಾಇಲಾಹ ಇಲ್ಲಲ್ಲಾಹ್ ಎನ್ನುವಾಗ ಅವನಿಗೆ ಅಲ್ಲಾಹನ ಹೊರತು ಅನ್ಯ ಆರಾಧ್ಯರಿರಬಾರದು ಎಂಬುದನ್ನು ಅದು ಆವಶ್ಯಪಡುತ್ತದೆ. ನೀವು ಭಯದಿಂದ, ಗೌರವದಿಂದ, ಪ್ರೀತಿಯಿಂದ, ಭಯದಿಂದ, ಆಸೆಯಿಂದ, ಭರವಸೆಯಿಡುವ ಮೂಲಕ ಮತ್ತು ಪ್ರಾರ್ಥಿಸುವ ಮೂಲಕ ಯಾರ ಆಜ್ಞಾಪಾಲನೆ ಮಾಡುತ್ತೀರೋ ಮತ್ತು ಆಜ್ಞೋಲ್ಲಂಘನೆ ಮಾಡುವುದಿಲ್ಲವೋ ಅವನೇ ಆರಾಧ್ಯ (ಇಲಾಹ್). ಇದು ಅಲ್ಲಾಹನಿಗಲ್ಲದೆ ಇತರ ಯಾರಿಗೂ ಯೋಗ್ಯವಾದುದಲ್ಲ. ಅಲ್ಲಾಹನಿಗೆ ಮಾತ್ರ ಸೀಮಿತವಾಗಿರುವ ಈ ಮೇಲಿನ ವಿಷಯಗಳನ್ನು ಯಾರಾದರೂ ಅಲ್ಲಾಹು ಅಲ್ಲದವರಿಗೆ ಅರ್ಪಿಸಿದರೆ ಅದು ಲಾಇಲಾಹ ಇಲ್ಲಲ್ಲಾಹ್ ಎಂಬ ವಚನದಲ್ಲಿ ಅವನಿಗಿರುವ ನಿಷ್ಕಳಂಕತೆಯ ಕೊರತೆಯೂ, ತೌಹೀದ್‌ನ ಅಪೂರ್ಣತೆಯೂ ಆಗಿದೆ. ಈ ಮೇಲಿನ ವಿಷಯಗಳಲ್ಲಿ ಅವನು ಯಾವುದನ್ನೆಲ್ಲ ಅಲ್ಲಾಹು ಅಲ್ಲದವರಿಗೆ ಅರ್ಪಿಸುತ್ತಾನೋ ಆ ವಿಷಯಗಳಿಗೆ ಅನುಸಾರವಾಗಿ ಅವನಲ್ಲಿ ಅಲ್ಲಾಹು ಅಲ್ಲದವರ ದಾಸ್ಯತ್ವವಿದೆ. ಇವೆಲ್ಲವೂ ಶಿರ್ಕ್‌ನ ವಿವಿಧ ಶಾಖೆಗಳಲ್ಲಿ ಒಳಪಟ್ಟದ್ದಾಗಿವೆ." [ತಹ್ಕೀಕ್ ಕಲಿಮತಿಲ್ ಇಖ್ಲಾಸ್]

**وَصَلَّى اللهُ وَسَلَّم عَلَى نَبِيِّنَا مُحَمَّدٍ وَعَلى آلِهِ وَصَحْبِهِ أجْمَعِين .**

*********

# ಪರಿವಿಡಿ


| م | العنوان | الصفحة |
|---|---|---|
| 1 | ಪ್ರಸ್ತಾವನೆ | 1 |
| 2 | ಪ್ರಾರ್ಥನೆ ಆರಾಧನೆಯಾಗಿದೆ | 3 |
| 3 | ಪ್ರಾರ್ಥನೆ ಅಲ್ಲಾಹನೊಂದಿಗೆ ಮಾತ್ರ | 8 |
| 4 | ಉಲಮಾಗಳು ಏನೆನ್ನುತ್ತಾರೆ? | 16 |

IslamHouse.com